ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ,
ನವನಗರ, ಹುಬ್ಬಳ್ಳಿ - 580 025
ದೂರವಾಣಿ ಸಂಖ್ಯೆ: 0836-2223867

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
Company Office,
Navanagar, Hubballi-580025

www.hescom.karnataka.gov.in E-mail ID: gmadmhr.hescom@gmail.com
Corporate Identity Number [CIN]: U31401KA2002SGC030437

ಕ್ರಮ ಸಂಖ್ಯೆ: ಹೆಸ್ಕಾಂ/ಪ್ರುವ್ಯ(ಆ)/ಉಲೆನಿ(ಆ)/ಲೆ(ಪಿ&ವೈ)/ಸಲೆ(ಪಿ&ವೈ)/ಸ(ವೈ)/2025-26/ 045-9753 ದಿನಾಂಕ 9 JAN 2026
ಲಗತ್ತು:

# ಸುತ್ತೋಲೆ

ವಿಷಯ : ಹುವಿಸಕಂನಿ., ಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಆಸ್ಪತ್ರೆಗಳ ವಿವರ.

ಉಲ್ಲೇಖ: ಈ ಕಾರ್ಯಾಲಯ ಆದೇಶ ಸಂ: ಹೆಸ್ಕಾಂ/ಪ್ರುವ್ಯ(ಆ ಮತ್ತು ಮಾಸಂಅ)/ ಲೆಅ(ಪಿಎಂಸಿ)/ವೈದ್ಯಕೀಯ/ಸಿವೈಎಸ್-611/ 15.06.2012

**************

ನಿಗಮವು ತನ್ನ ಅಧಿಕಾರಿ/ನೌಕರರಿಗೆ/ಅವಲಂಬಿತರಿಗೆ ಬರಬಹುದಾದ ಮಾರಣಾಂತಿಕ ಖಾಯಿಲೆಗಳಿಗೆ (ಹೃದ್ರೋಗ, ಕ್ಯಾನ್ಸರ್, ಮೆದುಳು ಮತ್ತು ಮೂತ್ರಪಿಂಡ ಹಾಗೂ ಅಪಘಾತ) ಸಂಬಂಧಿಸಿದಂತೆ, ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಲು ಈ ಕೆಳಗಿನ ಆಸ್ಪತ್ರೆಗಳನ್ನು ನಿಗಮದ ಆದೇಶ ಸಂ: ಸಂ: ಹೆಸ್ಕಾಂ/ಪ್ರುವ್ಯ(ಆ ಮತ್ತು ಮಾಸಂಅ)/ಲೆಅ(ಪಿಎಂಸಿ)/ವೈದ್ಯಕೀಯ/ಸಿವೈಎಸ್-611/ 15.06.2012 ರಂತೆ ಪರಸ್ಪರ ಒಪ್ಪಂದ ಮಾಡಿಕೊಂಡು ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

| SL.No | MOU Hospital | Address | Start Date | End Date |
|---|---|---|---|---|
| 1 | SDM Narayana Heart Centre, Dharwad | Manjushree Nagar, Sattur, Dharwad- 580 009. | 19.10.2024 | 19.10.2027 |
| 2 | The Karnataka Cancer Therapy and Research Institute, Hubli | Navanagar, Hubli | 09.10.2024 | 09.10.2027 |
| 3 | The Karnataka Institute of Medical Science, Hubli | Vidyanagar, Hubli | 01.06.2024 | 01.06.2027 |
| 4 | M.M Joshi Eye Institute PVT Ltd, Hubli | Gokul Road, Hubli | 09.02.2024 | 08.02.2027 |
| 5 | SDM College of Medical science and Hospital, Dharwad | Manjushree Nagar, Sattur, Dharwad- 580 009. | 02.05.2024 | 02.05.2027 |
| 6 | Tatwadarshi Hospital, Hubli | M.T. Sagar, Near Shreya Nagar, Unkal Heggeri Road, Opp: Gokul Road Hubli-580030 | 22.01.2024 | 22.01.2027 |
| 7 | DR Bagewadis Eye and Dental Care Centre, Belagavi | #1354 Basvan lane, Belagavi-590002 | 08.04.2024 | 08.04.2027 |
| 8 | DR Agarwals Health Care LTD, Hubli | Raj Plaza, CTS No. 163/34B, Main Road, Deshpande Nagar, Hubli | 31.01.2024 | 31.01.2027 |
| 9 | Shree Ortho and Trauma Centre, Belagavi | Behind Hotel Sanman, Gandhi Bhavan, College Road, Belgavi- 590001 | 22.01.2024 | 22.01.2027 |

ಪು.ತಿ.ನೋ.

| SL.No | MOU Hospital | Address | Start Date | End Date |
|---|---|---|---|---|
| 10 | Suchirayu Health Care Solutions Ltd, Hubli | Survey No, 29, Javali Garden, Gokul Raod, Hubli | 28.11.2023 | 28.11.2026 |
| 11 | Ashoka Hospital, HUBLI | Behind Amruth Theater, Vidyanagar, Hubli-580021 | 28.11.2023 | 28.11.2026 |
| 12 | BLDE Hospital and research Centre | Smt. Bangaramma Sajjan Campus, Ashram Road, Vijayapur-586103 | 28.12.2024 | 28.12.2027 |
| 13 | K H PATIL INSTITUTE OF MEDICAL SCIENCE, GADAG | Gadag | 09.06.2025 | 09.06.2028 |
| 14 | HAVERI INSTITUTE OF MEDICAL SCIENCE, HAVERI | Haveri | 09.06.2025 | 09.06.2028 |
| 15 | KARWAR INSTITUTE OF MEDICAL SCIENCE, KARWAR | M G Road, Karwar | 21.06.2025 | 21.06.2028 |
| 16 | BELAGAVI INSTITUTE OF MEDICAL SCIENCES, BELAGAVI | Dr. B R Ambedkar Road, Sadashiv Nagar, Belagavi | 05.06.2025 | 05.06.2028 |
| 17 | SHRI BANASHANKARI EYE HOSPITAL, BAGALKOTE | Mahaveer road, Bagalkot | 18.06.2025 | 18.06.2028 |
| 18 | FORTIS HOSPITAL, BANGALORE | #154/9 Opp. IIMB, Bannerghatta Road, Bangalore & Cunningham Road, Bangalore. | 14.03.2025 | 14.03.2028 |
| 19 | ARIHANT HOSPITAL, NEHRU NAGAR, BELAGAVI | Nehru Nagar, Belegavi | 04.07.2025 | 04.07.2028 |

1. ನಿಗಮದಿಂದ ಆಸ್ಪತ್ರೆಯ ಹುಂಡಿಗಳನ್ನು ನೇರವಾಗಿ ಆಸ್ಪತ್ರೆಗೆ ಪಾವತಿಸುವ ಸಲುವಾಗಿ ವಾರ್ಡ್ ವೆಚ್ಚಗಳನ್ನು ಈ ಕೆಳಗಿನಂತೆ ನಿರ್ಬಂಧಿಸಲಾಗಿದೆ.

| ಹುದ್ದೆಯ ವಿವರ | ವರ್ಗ |
|---|---|
| ಅಧೀಕ್ಷಕ ಇಂಜಿನಿಯರ್ ಪದವೃಂದ ಅಥವಾ ಸಮಾನಾಂತರದ ಹುದ್ದೆಗಳು ಮತ್ತು ಮೇಲ್ಪಟ್ಟು | ಖಾಸಗಿ ವಾರ್ಡ (ಪ್ರೈವೇಡ ವಾರ್ಡ್) |
| ಅಧೀಕ್ಷಕ ಇಂಜಿನಿಯರ್ ಪದವೃಂದಗಳ ಕೆಳಗಿನ ಮತ್ತು ಸಹಾಯಕ ಇಂಜಿನಿಯರ್ ಮತ್ತು ಸಮಾನಾಂತರ ಪದವೃಂದದವರೆಗಿನ ಹುದ್ದೆಗಳು | ಅರೆ ಖಾಸಗಿ ವಾರ್ಡ (ಸೆಮಿ ಪ್ರುವೈಟ್ ವಾರ್ಡ್) |
| ಕಿರಿಯ ಇಂಜಿನಿಯರ್ ಪದವೃಂದ ಅಥವಾ ಸಮಾನಾಂತರದ ಹುದ್ದೆಗಳು ಮತ್ತು ಕೆಳಗಿನ ಹುದ್ದೆಗಳು | ಸಾಮಾನ್ಯ ಅಥವಾ ಅದಕ್ಕೆ ಸಮಾನವಾದ ವಾರ್ಡ (ಜನರಲ್ ವಾರ್ಡ್) |

2. ಈ ಯೋಜನೆಯ ಅಡಿಯಲ್ಲಿ ಪೂರ್ಣ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಪಡೆಯಲು ಈ ಕೆಳಗಿನ ಮಾರ್ಗಸೂಚಿಗಳನ್ನು ಅನುಸರಿಸುವುದು: -

i) ಈ ಯೋಜನೆಯ ಅಡಿಯಲ್ಲಿ ಅಧಿಕಾರಿ/ನೌಕರರ ಮತ್ತು ಅವರ ಅವಲಂಬಿತರ ವೈದ್ಯಕೀಯ ಚಿಕಿತ್ಸೆಗಾಗಿ ನಿಗಮವು ಸದರಿ ಆಸ್ಪತ್ರೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಆದ ಕಾರಣ ಆಸ್ಪತ್ರೆಗೆ ದಾಖಲಾಗುವ ಸಮಯದಲ್ಲಿ ಅಥವಾ ನಂತರದಲ್ಲಿ ಯಾವುದೇ ರೀತಿಯ ಮುಂಗಡ ಹಣವನ್ನು ಪಾವತಿಸುವ ಅಗತ್ಯವಿರುವುದಿಲ್ಲ.

ii) ರೋಗಿಯು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ಬಿಲ್ಲನ್ನು ಆಸ್ಪತ್ರೆಯು ನೇರವಾಗಿ ಸಂಬಂಧಪಟ್ಟ ವಿಭಾಗ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ. ಸದರಿ ಬಿಲ್ಲನ್ನು ಮೊದಲ ಆದ್ಯತೆಯ ಮೇರೆಗೆ ಕೇಂದ್ರ ಸರ್ಕಾರದಿಂದ ಕಾಲಕಾಲಕ್ಕೆ ಬದಲಾಗುವ CGHS ದರಪಟ್ಟಿ ಪ್ರಕಾರ ಪರಿಶೀಲಿಸಿ, ಆಂತರಿಕ ಪರಿಶೋಧನೆಗೆ ಒಳಪಡಿಸಿ, 15 ದಿನಗಳೊಳಗಾಗಿ ನಿಗಮ ಕಛೇರಿಗೆ ಪರಿಶೀಲನೆಗಾಗಿ/ಅನುಮೋದನೆಗಾಗಿ ಸಲ್ಲಿಸುವುದು.

iii) ಅಧಿಕಾರಿ/ನೌಕರರು ಪಡೆಯಲು ಇಚ್ಛಿಸಿರುವ ಚಿಕಿತ್ಸೆಯು "ವೈದ್ಯಕೀಯ ನಿಯಮಾವಳಿಯಲ್ಲಿ ವ್ಯಾಖ್ಯಾನಿಸಿರುವಂತೆ ನೌಕರರಿಗೆ ಅಥವಾ ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ಮಾತ್ರ ಅನ್ವಯಿಸಿದೆಯೇ? ಎಂಬುದನ್ನು ವಿಭಾಗಾಧಿಕಾರಿಗಳು ಖಾತ್ರಿಪಡಿಸಿಕೊಂಡು ರೋಗಿಯ ಗುರುತು ಪತ್ರ (Identification Letter) ಮತ್ತು ನೌಕರರೊಂದಿಗೆ ರೋಗಿಯ ಸಂಬಂಧವನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ನೀಡಿ ಅದರ ಒಂದು ಪ್ರತಿಯನ್ನು ಆಸ್ಪತ್ರೆಗೂ ನೀಡತಕ್ಕದ್ದು. ಅವಲಂಬಿತರ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಿ ಮರು ಪಾವತಿಗಾಗಿ ವೈದ್ಯಕೀಯ ಬಿಲ್ಲನ್ನು ಸಲ್ಲಿಸುವುದು.

iv) ಈ ವೈದ್ಯಕೀಯ ಚಿಕಿತ್ಸೆಯ ಸೌಲಭ್ಯವು ಹೆಸ್ಕಾಂ ವ್ಯಾಪ್ತಿಯ ಎಲ್ಲಾ ಖಾಯಂ ಅಧಿಕಾರಿ/ನೌಕರರಿಗೆ ಅನ್ವಯಿಸುತ್ತದೆ.

v) ಆಸ್ಪತ್ರೆಗೆ ನೀಡುವ ರೆಫರಲ್ ಪತ್ರವನ್ನು ಉಲ್ಲೇಖಿತ ಆದೇಶದಲ್ಲಿ ಪ್ರತ್ಯಾಯೋಜಿಸಿರುವಂತೆ ಸಂಬಂಧಿಸಿದ ಅಧಿಕಾರಿಗಳು ಮಾತ್ರ ಸಹಿ ಮಾಡತಕ್ಕದ್ದು. ಬೇರೆ ಯಾವ ಅಧಿಕಾರಿಗಳಿಗೂ ರೆಫೆರಲ್ ಪತ್ರಕ್ಕೆ ಸಹಿ ಮಾಡುವ ಅಧಿಕಾರವಿರುವುದಿಲ್ಲ.

**ಮಾನ್ಯ ವ್ಯವಸ್ಥಾಪಕ ನಿರ್ದೇಶಕರು,**
**ಹುವಿಸಕಂನಿ ರವರಿಂದ ಅನುಮೋದಿಸಲ್ಪಟ್ಟಿದೆ.**

ಪ್ರಧಾನ ವ್ಯವಸ್ಥಾಪಕರು,
(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುಬ್ಬಳ್ಳಿ.

ಪ್ರತಿಯನ್ನು,
1) ಮುಖ್ಯ ಇಂಜಿನಿಯರರು (ವಿ), ವಲಯ ಕಛೇರಿ, ಹು.ವಿ.ಸ.ಕಂ.ನಿ. ಹುಬ್ಬಳ್ಳಿ/ಬೆಳಗಾವಿ.
2) ಆರ್ಥಿಕ ಸಲಹೆಗಾರರು (ಆಂ.ಪ), ನಿಗಮ ಕಛೇರಿ, ಹು.ವಿ.ಸ.ಕಂ.ನಿ, ಹುಬ್ಬಳ್ಳಿ.
3) ಅಧೀಕ್ಷಕ ಇಂಜಿನೀಯರರು (ವಿ), ಹು.ವಿ.ಸ.ಕಂ.ನಿ, ಹುಬ್ಬಳ್ಳಿ /ಗದಗ /ಹಾವೇರಿ/ ಶಿರಸಿ /ಬೆಳಗಾವಿ /ಚಿಕ್ಕೋಡಿ /ಬಿಜಾಪುರ /ಬಾಗಲಕೋಟೆ.
4) ಅಧೀಕ್ಷಕ ಇಂಜಿನೀಯರರು (ವಿ) ಐ.ಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ ರವರ ಮಾಹಿತಿಗಾಗಿ ಹಾಗೂ ಹೆಸ್ಕಾಂ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
5) ಎಲ್ಲ ಕಾರ್ಯನಿರ್ವಾಹಕ ಇಂಜಿನಿಯರರು (ವಿ), ಹು.ವಿ.ಸ.ಕಂ.ನಿ.
6) ಎಲ್ಲ ಲೆಕ್ಕಾಧಿಕಾರಿಗಳು (ಆಂ.ಪ), ಹು.ವಿ.ಸ.ಕಂ.ನಿ.
7) ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು /ನಿರ್ದೇಶಕರು(ತಾಂತ್ರಿಕ) / ನಿರ್ದೇಶಕರು (ಹಣಕಾಸು) ರವರ ಮಾಹಿತಿಗಾಗಿ ಹಾಗೂ ಮಾನ್ಯರ ಗಮನಕ್ಕೆ ತರಲು ಕೋರಲಾಗಿದೆ.
8) ಕಂಪನಿ ಕಾರ್ಯಾಲಯದ ಎಲ್ಲ ಶಾಖೆಗಳಿಗೆ.
9) ಮುಖ್ಯ ಕಡತ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ WWW.HESCOM.CO.IN ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ.